|| ಶ್ರೀ ಮಲ್ಹಾರಯೇ ನಮಃ ||



# ಶ್ರೀ ಮೈಲಾರಲಿಂಗೇಶ್ವರ ಟ್ರಸ್ಟ್ (ರಿ) ಬೆಂಗಳೂರು

೧. ಬೆಂಗಳೂರು ನಗರದಲ್ಲಿ ಕುಲಸ್ವಾಮಿಯ ಕೃಪೆ, ಗುರುಗಳ ಪ್ರೇರಣಾನುಗ್ರಹ ಹಾಗೂ ಕುಲಬಾಂಧವರ ಸೇವೆ ಸಹಕಾರಗಳಿಂದ ಇಸವಿ 1998 ರಿಂದಲೂ ಟ್ರಸ್ಟ್ ವತಿಯಿಂದ ಸ್ವಾಮಿಯ ಪೂಜಾ ಕೈಂಕರ್ಯಗಳು ನಡೆಯುತ್ತಿದ್ದು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕುಲಸ್ವಾಮಿಯ ದೇವಾಲಯ ನಿರ್ಮಾಣ ಮಾಡಬೇಕೆಂಬುದು ಭಕ್ತಾಭಿಮಾನಿಗಳ ಒತ್ತಾಸೆಯಾಗಿದೆ.

೨. ಭಗವದನುಗ್ರಹ ಮತ್ತು ತಮ್ಮ ಉದಾರ ಕಾಣಿಕೆಯಿಂದ ಬೆಂಗಳೂರು ನಗರದ ಹೊರವಲಯದಲ್ಲಿನ ದೊಡ್ಡಮಾರನಹಳ್ಳಿ ಆಂಜನೇಯ ಬಡಾವಣೆಯಲ್ಲಿ ದೇವಾಲಯ ನಿರ್ಮಾಣಕ್ಕೆ 6200 ಚ. ಅಡಿ ವಿಸ್ತೀರ್ಣದ ಜಾಗೆಯನ್ನು ಇಸವಿ 2018 ರಲ್ಲಿ ಖರೀದಿಸಿ 2019 ರಲ್ಲಿ ಭೂಮಿ ಪೂಜೆ ನಡೆಸಲಾಯಿತು. ದೇವಾಲಯ ನಿರ್ಮಾಣ ಕಾರ್ಯಕ್ಕೆ 5 ಕೋಟಿ ರೂಗಳು ಬೇಕಾಗುತ್ತದೆಂದು ಅಂದಾಜು ಮಾಡಲಾಗಿದ್ದು ಕಟ್ಟಡದ ಕಾಮಗಾರಿ ಆರಂಭಿಸಲು ಬೇಕಾಗುವಷ್ಟು ಮೊಬಲಗು ಸಂಗ್ರಹ ನಿಧಾನವಾದುದರಿಂದ ಹಾಗೂ ಕೋವಿಡ್ ಮುಂತಾದ ಅನಿವಾರ್ಯ ಕಾರಣಗಳಿಂದ ಈ ಕಾರ್ಯ ಮುಂದುವರೆಯದಿದ್ದುದರಿಂದ ಇಲ್ಲಿಯವರೆಗೂ ಭಕ್ತಾದಿಗಳಿಂದ ಕಟ್ಟಡ ಕಾರ್ಯಕ್ಕೆಂದು ಸಂಗ್ರಹವಾಗಿರುವ ನಿಧಿಯನ್ನು ಹಾಗೂ ಬಡ್ಡಿಯನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ನಲ್ಲಿ ಟ್ರಸ್ಟ್ ಹೆಸರಿನಲ್ಲಿ ಮೀಸಲು ಠೇವಣಿ (FD ) ಇಡಲಾಗಿದೆ. ಸದರಿ ಕಟ್ಟಡ ನಿಧಿಯನ್ನು ದೇವಸ್ಥಾನ ನಿರ್ಮಾಣ ಹಾಗೂ ಜೀರ್ಣೋದ್ಧಾರ ಕಾರ್ಯಕ್ಕೆ ಮಾತ್ರ ಉಪಯೋಗಿಸಲಾಗುತ್ತದೆಂದು ಟ್ರಸ್ಟ್ ಭರವಸೆ ನೀಡುತ್ತದೆ.

೩. ಈ ಮಧ್ಯದಲ್ಲಿ ಬೆಂಗಳೂರು ನಗರದ ಜಾಲಹಳ್ಳಿ ವ್ಯಾಪ್ತಿಯಲ್ಲಿನ ಕುವೆಂಪುನಗರದ ಸಮೀಪವಿರುವ ಹಾಗೂ ಕಳೆದ ಸುಮಾರು 35 ವರ್ಷಗಳಿಂದಲೂ ಪೂಜೆ ಸೇವಾದಿಗಳು ನಡೆಯುತ್ತಿರುವ ಶ್ರೀ ಗುಡ್ಡೆ ವಿನಾಯಕ ದೇವಾಲಯ ಸಂಕೀರ್ಣವನ್ನು ಸದರಿ ದೇವಾಲಯ ಸಮಿತಿಯವರು ಶ್ರೀ ಮೈಲಾರಲಿಂಗೇಶ್ವರ ಟ್ರಸ್ಟ್ ಗೆ ವಹಿಸಿಕೊಟ್ಟಿದ್ದು ಈ ದೇವಾಲಯ ಸಂಕೀರ್ಣಕ್ಕೆ **"ಶ್ರೀ ಮೈಲಾರಲಿಂಗೇಶ್ವರ ಗುಡ್ಡೆ ವಿನಾಯಕ ದೇವಸ್ಥಾನ"** ಎಂದು ಮರುನಾಮಾಂಕಿತ ಮಾಡಿ ಶ್ರೀ ಗುಡ್ಡೆ ವಿನಾಯಕ ದೇವಸ್ಥಾನ ಹಾಗೂ ಅದರ ಜಾಗವನ್ನು ಶ್ರೀ ಮೈಲಾರಲಿಂಗೇಶ್ವರ ಟ್ರಸ್ಟ್ ಗೆ ವಹಿಸಿಕೊಟ್ಟು ಹಕ್ಕುಪತ್ರ ನೀಡುವಂತೆ ಕರ್ನಾಟಕ ಘನ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು ಆ ಪ್ರಕ್ರಿಯೆ ಚಾಲನೆಯಲ್ಲಿದೆ.



೪. ಮೇಲ್ಕಾಣಿಸಿದ ದೇವಾಲಯ ಸಂಕೀರ್ಣದಲ್ಲಿನ ದೇವರುಗಳ ದೈನಂದಿನ ಪೂಜೆ ಹಾಗೂ ನಿರ್ವಹಣೆಯನ್ನು ಇಸವಿ ೨೦೨೪ ರ ಜೂನ್ ತಿಂಗಳಿನಿಂದ ಟ್ರಸ್ಟ್ ನಡೆಸಿಕೊಂಡು ಬರುತ್ತಿದ್ದು ಪ್ರತಿದಿನ ಪಂಚಾಮೃತಾಭಿಷೇಕ ಸಹಿತ ಪೂಜೆ, ಪ್ರತಿ ಭಾನುವಾರ ರುದ್ರಾಭಿಷೇಕ, ಪ್ರತಿ ತಿಂಗಳು ಸಂಕಷ್ಟ ಚತುರ್ಥಿ ಪೂಜೆ, ಚಂಪಾ ಷಷ್ಠಿಯಂದು ಸ್ವಾಮಿಗೆ ಭಂಡಾರಾರ್ಚನೆ, ಶಿವರಾತ್ರಿ ಉತ್ಸವ, ಗಣೇಶ ಚತುರ್ಥಿ ಮುಂತಾದ ಪೂಜಾ ಕೈಂಕರ್ಯಗಳು ನಡೆಯುತ್ತಿವೆ.

೫. ಈ ಸದರಿ ಪೂಜಾ ಕೈಂಕರ್ಯಗಳ ವ್ಯವಸ್ಥೆಯು ನಿರಂತರ ನಡೆಯುವಂತಾಗಬೇಕೆಂಬುದು ಬಹುಜನ ಭಕ್ತರ ಹಾಗೂ ಟ್ರಸ್ಟ್ ನ ಅಪೇಕ್ಷೆಯಾಗಿದೆ. ಅದಕ್ಕೋಸ್ಕರ " ಶಾಶ್ವತ ಪೂಜಾನಿಧಿ ಯನ್ನು ಸ್ಥಾಪಿಸಿ, ಅದರ ಅಡಿಯಲ್ಲಿ ಪ್ರತಿಯೊಬ್ಬ ಭಕ್ತರಿಂದ ಒಮ್ಮೆ ಮಾತ್ರ ಈ ನಿಧಿಗೆ ಕನಿಷ್ಠ 2651 ರೂಪಾಯಿಗಳನ್ನು ಅಥವಾ ಇದಕ್ಕಿಂತ ಹೆಚ್ಚು ಅವರು ಅಪೇಕ್ಷೆ ಪಟ್ಟ ನಿಧಿಯನ್ನು ಸಂಗ್ರಹಿಸಿ, ಬ್ಯಾಂಕ್ ನಲ್ಲಿ ಠೇವಣಿ ಇಟ್ಟು, ಅದರ ಬಡ್ಡಿಯಿಂದ ಭಕ್ತರು ಅಪೇಕ್ಷೆ ಪಟ್ಟು ನಿಗದಿಪಡಿಸಿದ ದಿನಗಳಂದು (ಹುಟ್ಟು ಹಬ್ಬ ಮದುವೆ ವಾರ್ಷಿಕೋತ್ಸವ ಹಾಗೂ ಇತರೆ ವಿಶೇಷ ದಿನಗಳು) ಪೂಜೆ ಸಲ್ಲಿಸಿ ಪಸಾದ ತಲುಪಿಸುವ ಉಪಕ್ರಮವನ್ನು ಟ್ರಸ್ಟ್ ಹಮ್ಮಿಕೊಂಡಿದೆ. ಈ ಶಾಶ್ವತ ಪೂಜಾ ಅಭಿಯಾನದಲ್ಲಿ ಕನಿಷ್ಠ 4000 ಜನ ಭಕ್ತರಾದರೂ ಪಾಲ್ಗೊಂಡಲ್ಲಿ ನಿರಂತರ ಪೂಜೆ ನಡೆಸಲು ಸಾಧ್ಯವಾಗುತ್ತದೆ. ಆದ್ದರಿಂದ ಬಹು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಭಿಮಾನಿಗಳು ಭಾಗವಹಿಸಿ, ಶಾಶ್ವತ ಪೂಜಾ ನಿಧಿಗೆ ತಮ್ಮ ಹಾಗೂ ತಮ್ಮ ಕುಟುಂಬದವರೆಲ್ಲರ ಹೆಸರನ್ನು ನೋಂದಾಯಿಸುವುದರ ಜೊತೆಗೆ ತಮ್ಮ ಪರಿಚಿತ ಭಕ್ತರನ್ನು ಹಾಗೂ ಹಿತೈಷಿಗಳನ್ನು ಈ ಶಾಶ್ವತ ಪೂಜಾನಿಧಿ ಯಲ್ಲಿ ಪಾಲ್ಗೊಳ್ಳುವಂತೆ ಸಹಕರಿಸಿ ಪುಣ್ಯಭಾಗಿಗಳಾಗಬೇಕಾಗಿ ಪ್ರಾರ್ಥನೆ.



# ದೇವಾಲಯದ ಸ್ಥಳ

೬. ಸದರೀ ಶ್ರೀ ಮೈಲಾರಲಿಂಗೇಶ್ವರ ಗುಡ್ಡೆ ವಿನಾಯಕ ದೇವಸ್ಥಾನವು ಜಾಲಹಳ್ಳಿ ಮೆಟ್ರೋ ಸ್ಟೇಷನ್ ನಿಂದ 7 ಕಿಮೀ ಹಾಗೂ ಗಂಗಮ್ಮಾ ವೃತ್ತದಿಂದ 2 ಕಿಮೀ ದೂರದಲ್ಲಿದ್ದು ಬಿಎಂಟಿಸಿ ಬಸ್ ವ್ಯವಸ್ಥೆ ಕೂಡ ಇದ್ದು, ಭಕ್ತಾಭಿಮಾನಿಗಳು ದೇವಸ್ಥಾನಕ್ಕೆ ಭೇಟಿ ನೀಡಿ  ದರ್ಶನ ಪಡೆಯಲು ಅನುಕೂಲವಿದೆ.

**ಶಾಶ್ವತ ಪೂಜೆಗೆ ಇಚ್ಛಿಸುವವರು 2651ರೂ ಗಳನ್ನು ಸಂದಾಯಿಸಿ ಇಲ್ಲಿ ಕೊಟ್ಟಿರುವ QR ಕೋಡ್ ಅನ್ನು ಉಪಯೋಗಿಸಿ ತಮ್ಮ ವಿವರಗಳನ್ನು ಸಲ್ಲಿಸಬೇಕಾಗಿ ವಿನಂತಿ.**

6360870140

www.srimylarlinga.com

**ಜೈ ಜೈ ಮಲ್ಲಾರಿ ! ಏಳುಕೋಟಿ ಮಲ್ಲಾರಿ !!**